# ಭೂಮಿಗೆ ಡಿಮ್ಯಾಂಡ್



ಭೂಮಿ ಪೆಡ್ನೇಕರ್ ಸದ್ಯಕ್ಕೆ ಬಾಲಿವುಡ್‌ನ ಬಹುಬೇಡಿಕೆಯ ನಟಿ. ಕಳೆದ ವರ್ಷ ಈಕೆ ನಟಿಸಿದ ಮೂರೂ ಸಿನಿಮಾಗಳು ಬಾಕ್ಸ್‌ಆಫೀಸ್ ಕಲೆಕ್ಷನ್ ಮಾತ್ರವಲ್ಲ, ವಿಮರ್ಶಕರ ಮೆಚ್ಚುಗೆಯನ್ನೂ ಗಳಿಸಿದವು. 'ಸಾಂಡ್ ಕಿ ಆಂಖ್', 'ಬಾಲ' ಮತ್ತು 'ಪತಿ ಪತ್ನಿ ಔರ್ ವೊ'ನಲ್ಲಿ ಭೂಮಿಯ ಅಭಿನಯಕ್ಕೆ ಹೊಗಳಿಕೆ ಹೆಚ್ಚೇ ಕೇಳಿಬಂದವು.

ಈ ವಾರ ಭೂಮಿ ಅಭಿನಯಿಸಿದ 'ಭೂತ್ ಪಾರ್ಟ್ 1– ದಿ ಹಾಂಟೆಡ್ ಷಿಪ್' ಬಿಡುಗಡೆಯಾಗುತ್ತಿದೆ. ಹೆಸರೇ ಸೂಚಿಸುವಂತೆ ಇದರ ಪಾರ್ಟ್ 2 ಕೂಡಾ ಬರಲಿದೆ. 'ವಿಭಿನ್ನ ಕಥಾನಕಗಳ ಈ ಚಿತ್ರದಲ್ಲಿ ನಟಿಸಲು ಸಿಕ್ಕಿದ್ದು ನನ್ನ ಪುಣ್ಯ' ಎಂದಿದ್ದಾಳೆ ಭೂಮಿ.

'ನಾನು ಯಾವತ್ತಿದ್ದರೂ ಚಿತ್ರದ ಕಥೆಗಳನ್ನು ಗಮನಿಸುತ್ತೇನೆ. ಬಾಲಿವುಡ್‌ನಲ್ಲಿ ಬರುವ ಅತ್ಯುತ್ತಮ ಸಿನಿಮಾಗಳಲ್ಲಿ ನಾನಿರಬೇಕು ಎನ್ನುವುದು ನನ್ನ ಬಯಕೆ. ಅದು ಸೀಕ್ವೆಲ್ ಆದರೂ ಸರಿಯೇ, ಚಿತ್ರಕಥೆ ಚೆನ್ನಾಗಿದ್ದರೆ ನಾನು ಸೈ' ಎನ್ನುವುದು ಆಕೆಯ ಸ್ಪಷ್ಟನುಡಿ. ಈ ವರ್ಷ ಇನ್ನೂ ಮೂರು ಸಿನಿಮಾಗಳು ಆಕೆಯ ಕೈಯಲ್ಲಿವೆ. 'ಡೋಲಿ ಕಿಟ್ಟಿ ಔರ್ ವೊ ಚಮಕ್‌ತೇ ಸಿತಾರೆ' ಮತ್ತು 'ದುರ್ಗಾವತಿ' ಆಕೆ ಹೆಚ್ಚು ನಿರೀಕ್ಷೆ ಇಟ್ಟುಕೊಂಡ ಚಿತ್ರಗಳು. ಇನ್ನೂ ಹೆಸರಿಡದ ಇನ್ನೊಂದು 'ಬಿಗ್ ಬಜೆಟ್' ಚಿತ್ರವಂತೆ.

■ ಬಿಂದು



# ಅಕ್ಷಯ್ ಕಲಿತ ಜೀವನಪಾಠ

'ನಾನು ತುಂಬ ಗಂಭೀರ ವ್ಯಕ್ತಿ, ನನಗೆ ನಗುವೇ ಬರುವುದಿಲ್ಲ ಎಂದು ಜನರು ತಿಳಿದುಕೊಂಡುಬಿಟ್ಟಿದ್ದಾರೆ. ನೋಡಲಿಕ್ಕೆ ಹಾಗೇ ಕಾಣಿಸುತ್ತೇನೋ ಏನೋ. ಆದರೆ ವಾಸ್ತವದಲ್ಲಿ ನಾನು ತುಂಬ ತಮಾಷೆಯ ಮನುಷ್ಯ. ಯಾವ ವಿಷಯವನ್ನೂ ತುಂಬ ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ. ಇದೇ ಬದುಕಿನ ಖುಷಿಯ ಕೀಲಿಕೈ ಎಂದು ನನ್ನ ನಂಬಿಕೆ' – ಹೀಗೆ ಹೇಳಿರುವವರು ನಟ ಅಕ್ಷಯ್ ಖನ್ನಾ.

ಅಕ್ಷಯ್ ನಿರ್ವಹಿಸಿರುವ ಪಾತ್ರಗಳನ್ನು ಗಮನಿಸಿದರೆ ಅವರನ್ನು ಗಂಭೀರ ವ್ಯಕ್ತಿ ಎಂದು ಜನರು ಭಾವಿಸುವುದರಲ್ಲಿ ತಪ್ಪೇನೂ ಇಲ್ಲ ಬಿಡಿ. ಆದರೆ ಬದುಕಿನಲ್ಲಿ ಇರುವ ಈ ಲಘುತನವನ್ನು ಅವರು ವೃತ್ತಿಜೀವನದಲ್ಲಿಯೂ ಉಳಿಸಿಕೊಂಡಿದ್ದಾರೆ. 'ಸಿನಿಮಾ ಗೆಲ್ಲಬೇಕು ಎನ್ನುವುದು ಎಲ್ಲರ ಆಸೆ. ಆದರೆ ಚಿತ್ರ ಬಾಕ್ಸ್ ಆಫೀಸಿನಲ್ಲಿ ಹೇಗೆ ಹೋಗುತ್ತದೆ ಎಂದು ಊಹಿಸಲು ಯಾರಿಂದಲೂ ಸಾಧ್ಯವಿಲ್ಲ' ಎಂಬುದು 40ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ ಅವರ ಅನುಭವದ ಮಾತು. ಇತ್ತೀಚೆಗೆ ಬಿಡುಗಡೆಯಾದ ತಮ್ಮ 'ಸಬ್ ಕುಶಲ್ ಮಂಗಲ್' ಸಿನಿಮಾವನ್ನೇ ಅವರು ಉದಾಹರಣೆಯಾಗಿ ನೀಡುತ್ತಾರೆ.

'ಯಶಸ್ಸನ್ನೇ ಆಗಲಿ, ವೈಫಲ್ಯವನ್ನೇ ಆಗಲಿ ಅತಿಯಾಗಿ ತಲೆಗೆ ಏರಿಸಿಕೊಂಡರೆ, ಅದರಿಂದ ಹೊರಗೆ ಬರುವುದು ಕಷ್ಟವಾಗುತ್ತದೆ. ಅವೆರಡನ್ನೂ ಸಮಚಿತ್ತದಿಂದ ತೂಗಿಸಿಕೊಂಡು ಹೋಗಬೇಕು. ಆ ಎರಡೂ ಸಂಗತಿಗಳ ಜೊತೆ ಸ್ನೇಹದಿಂದ ಇರಬೇಕಷ್ಟೆ. ನಾನು ನನ್ನ ವೃತ್ತಿಜೀವನದುದ್ದಕ್ಕೂ ಸೋಲು ಗೆಲುವುಗಳನ್ನು ಹೀಗೆಯೇ ಸ್ವೀಕರಿಸಿದ್ದೇನೆ' ಎಂದು ಅಕ್ಷಯ್ ಬಣ್ಣದ ಬದುಕಿನಿಂದ ತಾವು ಕಲಿತ ಜೀವನಪಾಠವನ್ನೂ ಹೇಳಿದ್ದಾರೆ. ■